**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–1**

ಸಂಖ್ಯೆ: ಸಿ4(7) ಪ್ರೌ.ಶಾ.ಶಿ ವರ್ಗ/01/2012–13 ದಿನಾಂಕ: 16–05–2012

## ಜ್ಞಾಪನ

ವಿಷಯ: 2012ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಸಹಶಿಕ್ಷಕರ ವೃಂದದ ವರ್ಗಾವಣೆ ಗಣಕೀಕೃತ ಕೌನ್ಸಿಲಿಂಗ್‌ಗೆ ಹಾಜರಾಗಲು ದಿನಾಂಕಗಳ ವೇಳಾಪಟ್ಟಿ ಪ್ರಕಟಣೆ ಬಗ್ಗೆ.

–*****–

2012ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಸಹಶಿಕ್ಷಕರ ವೃಂದದ ಘಟಕದ ಹೊರಗಿನ ವರ್ಗಾವಣೆ ಕೌನ್ಸಿಲಿಂಗ್ ದಿನಾಂಕ: 17.05.2012 ರಿಂದ 24.05.2012 ರವರೆಗೆ ಅರ್ಜಿದಾರರು ಕೋರಿರುವ ವಿಭಾಗದ ಕೇಂದ್ರಗಳಲ್ಲಿ ನಡೆಯುತ್ತದೆ. ಈ ಕೌನ್ಸಿಲಿಂಗ್‌ಗೆ ಹಾಜರಾಗಬೇಕಾದ ಶಿಕ್ಷಕರ ಆದ್ಯತಾ ಪಟ್ಟಿ ಕ್ರಮಸಂಖ್ಯೆ ಹಾಗೂ ದಿನಾಂಕಗಳ ವೇಳಾಪಟ್ಟಿ ಈ ಕೆಳಕಂಡಂತಿದೆ.

| ಕ್ರ.ಸಂ | ದಿನಾಂಕ | ಹುದ್ದೆಯ ಪದನಾಮ | ಆದ್ಯತಾ ಪಟ್ಟಿ ಕ್ರಮ ಸಂಖ್ಯೆ |
|---|---|---|---|
| 1 | 17.05.2012 | ಸಹಶಿಕ್ಷಕರು | 1–300 |
| 2 | 18.05.2012 | ಸಹಶಿಕ್ಷಕರು | 301–700 |
| 3 | 19.05.2012 | ಸಹಶಿಕ್ಷಕರು | 701–1200 |
| 4 | 20.05.2012 | ಸಹಶಿಕ್ಷಕರು | 1201–1800 |
| 5 | 21.05.2012 | ಸಹಶಿಕ್ಷಕರು | 1801–3000 |
| 6 | 22.05.2012 | ಸಹಶಿಕ್ಷಕರು | 3001–5000 |
| 7 | 23.05.2012 | ಸಹಶಿಕ್ಷಕರು | 5001 ರಿಂದ ಕೊನೆಯ ಅಭ್ಯರ್ಥಿಯವರೆಗೆ |
| 8 | 24.05.2012 | ಮುಖ್ಯಶಿಕ್ಷಕರು/ಪದವಿಧರೇತರ ಮುಖ್ಯಶಿಕ್ಷಕರು/ವಿಶೇಷ ಶಿಕ್ಷಕರು | ಆದ್ಯತಾ ಪಟ್ಟಿ ಕ್ರಮ ಸಂಖ್ಯೆಯಲ್ಲಿರುವ ಎಲ್ಲಾ ಮುಖ್ಯಶಿಕ್ಷಕರು/ ಪದವಿಧರೇತರ ಮುಖ್ಯಶಿಕ್ಷಕರು/ ವಿಶೇಷ ಶಿಕ್ಷಕರು |

ಅಂತಿಮ ಆದ್ಯತಾ ಪಟ್ಟಿಯಲ್ಲಿ ಹೆಸರಿರುವ ಶಿಕ್ಷಕರು ಅವರು ಕೇಳಿದ ವಿಭಾಗದಲ್ಲಿ ನಿಗದಿತ ದಿನಾಂಕದಂದು ಬೆಳಿಗ್ಗೆ 9.30 ಘಂಟೆಗೆ ಕೌನ್ಸೆಲಿಂಗ್‌ಗೆ ಹಾಜರಾಗುವುದು. **ಶಿಕ್ಷಕರು ಅವರ ಕೌನ್ಸೆಲಿಂಗ್ ಸರದಿ ಬಂದಾಗ ಹಾಜರಾಗದಿದ್ದಲ್ಲಿ ಕೌನ್ಸೆಲಿಂಗ್‌ಗೆ ಪರಿಗಣಿಸಲಾಗುವುದಿಲ್ಲ.**

ಕೌನ್ಸೆಲಿಂಗ್‌ಗೆ ಹಾಜರಾಗುವಾಗ ಅರ್ಜಿಯೊಂದಿಗೆ ಕೋರಿರುವ ಆದ್ಯತೆಗಳಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ತರುವುದು ಕಡ್ಡಾಯ. (ಖಾಯಂ ಪೂರ್ವ ಸೇವಾವಧಿ ಘೋಷಣೆಯಾದ ಪ್ರಮಾಣ ಪತ್ರ., ಪ್ರಸ್ತುತ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿರುವುದಕ್ಕೆ ಸೇವಾ ದೃಢೀಕರಣ ಪತ್ರ,, ಪತಿ ಮತ್ತು ಪತ್ನಿ ಪ್ರಕರಣಗಳಲ್ಲಿ ಸಂಗಾತಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳದ ದಾಖಲೆ, ಪತಿ ಅಥವಾ ಪತ್ನಿ ಪ್ರಕರಣಗಳಲ್ಲಿ ಸಂಗಾತಿ ವಾಸಿಸುತ್ತಿರುವ ಸ್ಥಳದ ದಾಖಲೆ, ತೀವ್ರತರವಾದ ಖಾಯಿಲೆಯ ರೋಗಿಗಳ ಪ್ರಕರಣಗಳಲ್ಲಿ ಜಿಲ್ಲಾ ವೈದ್ಯಕೀಯ ಮಂಡಳಿಯು ನೀಡಿರುವ ವೈದ್ಯಕೀಯ ಪ್ರಮಾಣ ಪತ್ರ, ಅಂಗವಿಕಲ ಪ್ರಕರಣಗಳಲ್ಲಿ ಜಿಲ್ಲಾ ಸರ್ಜನ್ ನೀಡಿರುವ ಪ್ರಮಾಣ ಪತ್ರ, ಮಾಜಿ ಸೈನಿಕ ಪ್ರಕರಣಗಳಲ್ಲಿ ಸಂಬಂಧಿಸಿದ ಪ್ರಮಾಣ ಪತ್ರ, ಇತ್ಯಾದಿ) ಸಂಬಂಧಿಸಿದ ದಾಖಲೆಗಳಿಲ್ಲದಿದ್ದಲ್ಲಿ ಕೌನ್ಸೆಲಿಂಗ್‌ಗೆ ಪರಿಗಣಿಸಲಾಗುವುದಿಲ್ಲ.

2012ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಸಹಶಿಕ್ಷಕರ ವೃಂದದ ಘಟಕದ ಹೊರಗಿನ ವರ್ಗಾವಣೆ ಕೌನ್ಸಿಲಿಂಗ್ ನಡೆಯುವ ಕೇಂದ್ರಗಳ ವಿಳಾಸ ಈ ಕೆಳಕಂಡಂತಿದೆ.

- ಬೆಂಗಳೂರು ವಿಭಾಗ – ಶಿಕ್ಷಕರ ಸದನ, ಕೆ.ಜಿ.ರಸ್ತೆ, ಬೆಂಗಳೂರು.
- ಮೈಸೂರು ವಿಭಾಗ – ಸಹನಿರ್ದೇಶಕರ ಕಛೇರಿ, ಸಾ.ಶಿ.ಇಲಾಖೆ, ಡಿ.ಸುಬ್ಬಯ್ಯ ರಸ್ತೆ, ಮೈಸೂರು.
- ಬೆಳಗಾವಿ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ರೊದ್ದ ರಸ್ತೆ, ಧಾರವಾಡ.
- ಗುಲ್ಬರ್ಗಾ ವಿಭಾಗ – ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಐವಾನ್ ಶಾಹಿ ರಸ್ತೆ, ಗುಲ್ಬರ್ಗಾ.

ನಿರ್ದೇಶಕರು (ಪ್ರೌಢಶಿಕ್ಷಣ) ಹಾಗು
ನೋಡಲ್ ಅಧಿಕಾರಿಗಳು

ಗೆ

1. ನಿರ್ದೇಶಕರು ಪ್ರಾಥಮಿಕ ಶಿಕ್ಷಣ/ಪ್ರೌಢಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು.
2. ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಸಾ.ಶಿ.ಇಲಾಖೆ, ಧಾರವಾಡ/ಗುಲ್ಬರ್ಗಾ.
3. ವರ್ಗಾವಣೆ ಅರ್ಜಿ ಸಲ್ಲಿಸಿದ ಶಿಕ್ಷಕರ ಗಮನಕ್ಕೆ.

\\Typing3server\typing3server\E\EST4\Mamatha\LOKESH\Transfer-pri2012.doc